**Q.P. Code – 31452**

# Fourth Semester B.A. Degree Examination, April/May 2019

*(CBCS – Semester Scheme)*

## ಐಚ್ಛಿಕ ಕನ್ನಡ

## Paper IV – ಶ್ರೀ ರಾಮಾಯಣ ದರ್ಶನಂ, ಪಾಶ್ಚಾತ್ಯ ಕಾವ್ಯ ಮೀಮಾಂಸೆ ಮತ್ತು ವಿಮರ್ಶೆಯ ಪರಿಕಲ್ಪನೆಗಳು

*Time : 3 Hours]* *[Max. Marks : 90*

I. (ಅ) **ಒಂದು ಪದ್ಯದ** ಭಾವಾರ್ಥ ವಿವರಿಸಿ : **(1 × 5 = 5)**

1. ಕೈತವದೊಳವನಿಜಾತೆಯನೆಂತುಟಾದೊಡಂ
ಕವರ್ತೆಗೊಳ್, ಬೇರುಗೊಯ್ದವ ನೀರುಹಂಬೋಲೆ
ನಿಸ್ತೇಜನಾದಪಂ, ನಿರ್ವೀರ್ಯನಾದಪಂ,
ತನಗೆ ತಾಂ ಮಳ್ಗುವನೊಣಗಿ ಬಾಡಿ ಶುಷ್ಕತರು ದಲ್
ದಹನಕೆ ಸುಲಭ ಸಾಧ್ಯಂ? ಕಜ್ಜಮೆರಡುಂ ನಿನಗೆ
ಕೈಗೂಡುವುವು : ಪಡೆವೆ ಲಲನೆಯಂ ; ವೈರಿಯುಂ
ಹತನಹನ್......

2. ಹೊದೆಹೊದೆಗೆದರ್ದ ತಲೆ,
ಕೊಳೆ ಬೆವರ್ ಪತ್ತಿದುಡೆ, ತೇಜಂ ಮಸುಳ್ದ ಮೊಗಂ,
ಖಿನ್ನತೆಯ ಕೋರೆಯುತ್ತಿದ ಕಪೋಲದ ಪೊಲಂ,
ದಯಿತಾ ವಿಯೋಗಾಗ್ನಿಯಿಂಧನ ಶರೀರನಂ,
ರೂಕ್ಷರೂಪದ ರಾಮನಂ ಕಂಡು ಮುಂದಾಕ್ಷಿ,
ಶಬರಿ, ಬೇಡಂಗೆತ್ತಳೆನೆ, ಮೈಥಿಲೀ ಪ್ರಿಯನ
ದಾರುಣ ಸ್ಥಿತಿಗೇತಕಿನ್ ಬೇರೆ ಸಾಕ್ಷಿ?

(ಆ) **ಎರಡನ್ನು** ಸಂದರ್ಭ ಸಹಿತ ವಿವರಿಸಿ : **(2 × 3 = 6)**

1. ಆದ್ಯರಾದರಿಗೆಮ್ಮ ಕೂಡೆ ಕೊಳುಕೊಡೆ ನಂಟು ಪೇಸಂತೆ
2. ಮುಟ್ಟದಿರ್ಪಂಗೆ ಕೆಂಡಮುಂ ಕಿಡಿಮಾಣಿಕವೆ
3. ನೀರೊಣಗೆ ಪಿರಿಯ ಪೇರಾಲಮುಂ ಕಿರಿಯೊರಲೆಗುಣಿಸಪ್ಪುದು
4. ಪೆಣ್ಣಾದೊಡಂ ನೀನೆನಗೆ ಮತಿಯೊಳುಂ ಗಂಡುಗೆಣೆ

(ಇ) **ಒಂದಕ್ಕೆ** ಟಿಪ್ಪಣಿ ಬರೆಯಿರಿ : **(1 × 4 = 4)**

1. ಶಬರಿ
2. ಕುವೆಂಪು

II. **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2 × 10 = 20)**

1. ಮಾರೀಚನು ಮಾಯಾ ಜಿಂಕೆಯಾದ ಪ್ರಸಂಗವನ್ನು ವಿವರಿಸಿ.
2. ಸೀತಾಪಹರಣದ ಸಂದರ್ಭವನ್ನು ಕುರಿತು ಬರೆಯಿರಿ.
3. ಪತಿವ್ರತೆಯರ ಬಗೆಗೆ ರಾವಣನ ಅಭಿಪ್ರಾಯವೇನು?
4. ಶಬರಿಯು ರಾಮಲಕ್ಷ್ಮಣರನ್ನು ಹೇಗೆ ಉಪಚರಿಸಿದಳು?

III. (ಅ) ಒಂದು ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

1. ಪ್ಲೇಟೋನ ಕೃತಿಯೊಂದನ್ನು ಹೆಸರಿಸಿ.
2. 'ಪೊಯೆಟಿಕ್ಸ್' ಇದು ಯಾರ ಕೃತಿ?
3. 'ಅನುಕರಣವೇ ಕಾವ್ಯದ ನೆಲೆ' ಎಂದು ಹೇಳಿದವರು ಯಾರು?
4. ದುರಂತ ನಾಟಕವೊಂದನ್ನು ತಿಳಿಸಿ.
5. ಈಸ್ಕಿಲಸ್ ಯಾರು?

(ಆ) **ಎರಡಕ್ಕೆ** ಟಿಪ್ಪಣಿ ಬರೆಯಿರಿ : **(2 × 5 = 10)**

1. ರುದ್ರನಾಟಕ
2. ಕೆಥಾರ್ಸಿಸ್
3. ಸಾಕ್ರಟಿಸ್
4. ರಿಪಬ್ಲಿಕ್

(ಇ) **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2 × 10 = 20)**

1. ಕವಿಯು ತನ್ನ ಆದರ್ಶ ರಾಜ್ಯದಿಂದ ಬಹಿಷ್ಕರಿಸಲು ಪ್ಲೇಟೋ ಕೊಡುವ ಕಾರಣಗಳಾವುವು?
2. ಕಾವ್ಯದ ಉದ್ದೇಶವನ್ನು ಕುರಿತ ಅರಿಸ್ಟಾಟಲನ ನಿಲುವುಗಳೇನು?
3. ರುದ್ರನಾಟಕದ ಲಕ್ಷಣಗಳನ್ನು ವಿವರಿಸಿ.
4. ಐ.ಎ. ರಿಚರ್ಡ್ಸ್‌ನ ಕಾವ್ಯಾನುಭವದ ವಿಶ್ಲೇಷಣೆಯನ್ನು ಕುರಿತು ಬರೆಯಿರಿ.

IV. (ಅ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ : **(1 × 10 = 10)**

1. ಕೃತಿ ನಿಷ್ಠ ವಿಮರ್ಶೆ ಎಂದರೇನು? ಅದರ ಪ್ರಮುಖ ಲಕ್ಷಣಗಳನ್ನು ತಿಳಿಸಿ.
2. ಸ್ತ್ರೀ ನಿಷ್ಠ ವಿಮರ್ಶೆ ಬೆಳೆದು ಬಂದ ಬಗೆಯನ್ನು ವಿವರಿಸಿ.

(ಆ) **ಒಂದು** ಪದ್ಯದ ಪ್ರಾಯೋಗಿಕ ವಿಮರ್ಶೆ ಮಾಡಿ : **(1 × 10 = 10)**

1. ಕುರುಡು ಕಾಂಚಾಣಾ ಕುಣಿಯುತ್ತಲಿತ್ತು
ಕಾಲಿಗೆ ಬಿದ್ದವರ ತುಳಿಯುತ್ತಲಿತ್ತು
ಕುರುಡು ಕಾಂಚಾಣಾ
ಬಾಣಂತಿಯೆಲುಬು ಸಾ
ಬಾಣದ ಬಿಳುಪಿನಾ
ಕಾಣದ ಕಿರುಗೆಜ್ಜೆ ಕಾಲಾಗ ಇತ್ತೋ
ಸಣ್ಣ ಕಂದಮ್ಮಗಳ
ಕಣ್ಣೀನ ಕವಡೀಯ
ತಣ್ಣನ್ನ ಜೋಮಾಲೆ ಕೊರಳೊಳಗಿತ್ತೋ
ಬಡವರ ಒಡಲಿನ
ಬಡಬಾನಲದಲ್ಲಿ
ಸುಡು ಸುಡು ಪಂಜು ಕೈಯೊಳಗಿತ್ತೋ

2. ಎಲುಬಿನ ಕುದುರೆಯು ಕೆನೆಯುತ್ತಿತ್ತು ;
ನಾದವು ಬೊಮ್ಮನ ಬಿರಿವಂತಿತ್ತು !
ಎಲುಬಿನ ಮೂರ್ತಿಯು ಗಹಗಹಿಸಿತ್ತು ;
ಗುಡುಗಿನ ಮಾಲೆಯು ಪೊರಮಡುತ್ತಿತ್ತು !
ಕುದುರೆಯೂ ಕುಡಿದೂ, ಆಳೂ ಕುಡಿದೂ
ತಿಂದರು ಶವಗಳ ಲಠಿಲಠಿ ಕಡಿದೂ !
ಬತ್ತಿತು ರಣಧುನಿ ; ಇನ್ನೂ ದಾಹ !
ಮುಗಿದುವು ಹೆಣಗಳು, ಇನ್ನೂ ಹಸಿವೆ
ಬಡವರ ಗಂಟಲು ಬೇಗೆಯ ದಾಹ !
ಬಡವರ ಹೊಟ್ಟೆಯ ಬೆಂಕಿಯ ಹಸಿವೆ !
ತುಂಬದೊ ಹೊಟ್ಟೆ;
ತುಂಬದು ಹೊಟ್ಟೆ!
ಕೆಟ್ಟೇ ! ಕೆಟ್ಟೇ !
ಅಯ್ಯೋ ಕೆಟ್ಟೇ !
ಕಲ್ಕಿ
ನೋಡಿದನೆನ್ನಂ ಬೆಟ್ಟದ ಮೇಲೆ !
ಬರುತಿಹನಯ್ಯೋ ಒಲ್ಲೆ! ಒಲ್ಲೆ!
ನೋಡುತಲಿದ್ದೆ!
ಕಂಪಿಸಿ ಬಿದ್ದೆ ಕಲ್ಕಿ ! ಕಲ್ಕಿ ! ಎನ್ನುತ ಚೀರಿ
ಕನಸೊಡೆದೆದ್ದೆ!
ಇನ್ನೆಲ್ಲಿಯ ನಿದ್ದೆ?